# ಕರ್ನಾಟಕ ರಾಜ್ಯಪತ್ರ

## ಅಧಿಕೃತವಾಗಿ ಪ್ರಕಟಿಸಲಾದುದು

### ವಿಶೇಷ ಪತ್ರಿಕೆ

ಭಾಗ–1 ಬೆಂಗಳೂರು, ಗುರುವಾರ, ಜನವರಿ 6, 2003 (ಪುಷ್ಯ 26, ಶಕ ವರ್ಷ 1924) ನಂ. 60

ಶಿಕ್ಷಣ ಸಚಿವಾಲಯ

ಸುತ್ತೋಲೆ

ಸಂಖ್ಯೆ : ಇಡಿ :17: ಎಸ್‌ಇಪಿ:2003, ಬೆಂಗಳೂರು, ದಿನಾಂಕ 14ನೇ ಜನವರಿ 2003

ವಿಷಯ : ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಹುದ್ದೆಗಳನ್ನು ನೇರ ನೇಮಕಾತಿಯ ಹಾಗೂ ಬಡ್ತಿಯ ಮೂಲಕ ತುಂಬುವ ಕುರಿತು ಸೂಚನೆಗಳು

1. ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿರುವ ಹುದ್ದೆಗಳನ್ನು ನೇರ ನೇಮಕಾತಿಯ ಮೂಲಕ ಅಥವಾ ಬಡ್ತಿಯ ಮೂಲಕ ಆಯ್ಕೆ ಮಾಡಿ ನೇಮಕಾತಿ ಮಾಡುವ ಪ್ರಾಧಿಕಾರವು ಸಂಬಂಧಿಸಿದ ಆಡಳಿತ ಮಂಡಳಿಯಾಗಿದೆ. ಆದರೆ, ಆಡಳಿತ ಮಂಡಳಿಗಳು ಖಾಲಿ ಹುದ್ದೆಗಳನ್ನು ಸಕಾಲದಲ್ಲಿ ತುಂಬಲು ಕ್ರಮ ತೆಗೆದುಕೊಳ್ಳುತ್ತಿಲ್ಲ ಎನ್ನುವ ವಿಷಯವನ್ನು, ಕರ್ನಾಟಕ ರಾಜ್ಯ ಖಾಸಗಿ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳ ಮತ್ತು ನೌಕರರ ಸಂಘಟನೆಗಳ ಹೋರಾಟ ಸಮನ್ವಯ ಸಮಿತಿಯ ಅಧ್ಯಕ್ಷರಾದ ಶ್ರೀ ಬಸವರಾಜ್ ಎಸ್ ಹೊರಟ್ಟಿರವರು ದಿನಾಂಕ 13–11–2002 ರಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸರ್ಕಾರದ ಗಮನಕ್ಕೆ ತಂದಿರುತ್ತಾರೆ.

2. ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿನ ರಿಕ್ತ ಸ್ಥಾನಗಳನ್ನು ತುಂಬುವ ನೇರ ನೇಮಕಾತಿಯ ವಿಧಿ ವಿಧಾನವನ್ನು "   " ಈ ನಿಯಮಗಳ ಅನುಬಂಧ–1ರಲ್ಲಿ ನಿಗದಿಪಡಿಸಲಾಗಿದೆ. ದಿನಾಂಕ 31–01–2001ರ ಅಧಿಸೂಚನೆ ಸಂಖ್ಯೆ : ಇಡಿ : 64 :ವಿವಿಧ:2000 ರನ್ವಯ ಸದರಿ ನಿಯಮಗಳಿಗೆ ತಿದ್ದುಪಡಿ ಮಾಡಲಾಗಿದೆ. ಅದರನ್ವಯ ಸದರಿ ನಿಯಮಗಳಲ್ಲಿ ಅನುಬಂಧ–6ನ್ನು ಸೇರಿಸಲಾಗಿದೆ. ಅದು, ಅನುದಾನಿತ ಪ್ರೌಢ ಶಾಲೆಗಳಲ್ಲಿ ಮುಖ್ಯೋಪಾಧ್ಯಾಯರ ಹುದ್ದೆಗಳನ್ನು ಬಡ್ತಿಯ ಮೂಲಕ ತುಂಬುವ ಕಾರ್ಯ ವಿಧಾನಕ್ಕೆ ಸಂಬಂಧಿಸಿರುತ್ತದೆ. ಅದರ ಸಂಬಂಧಿಸಿದ ಭಾಗವನ್ನು ಈ ಕೆಳಗೆ ಉದ್ದರಿಸಿದೆ:

"(V) Based on the notified seniority list the appointing Authority shall pass a resolution and send suitable proposals for approval to the Competent Authority Viz, The Regional Secretary, Karnataka Secondary Education Examination Board and Ex-officio Joint Director of Public Instruction of the concerned Divisions with all relevant documents relating to seniority, qualification, service register, service particulars of all the teachers, fulfillment of roaster rules etc. If the Competent Authority after verifying the records is satisfied that all the requirements described in the rules have been compiled with, he may convey approval for promotions of the selected candidates. In case the promotion is not in accordance with the procedure specified under these rules the

Competent Authority may reject the proposal after Competent Authority within 90 days from the date of receipt of proposal in his office, failing which disciplinary action will be taken against her/him under KCS (CCA) Rules 1957. Candidate shall be promoted by the appointing Authority only after such approval by the Competent Authority and benefits of fixation of pay of such candidates shall be payable from the actual date of assuming the charge of the promotional post".

3. ಮೇಲೆ ವಿವರಿಸಿದ ಪೀಠಿಕೆಯಲ್ಲಿ, ಈ ಕೆಳಕಂಡ ಸೂಚನೆಗಳನ್ನು ಈ ಮೂಲಕ ನೀಡಲಾಗಿದೆ:–

1) ಅನುದಾನಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಉದ್ಭವಿಸುವ ರಿಕ್ತ ಸ್ಥಾನಗಳ ಕುರಿತು ಸಂಬಂಧಿಸಿದ ಆಡಳಿತ ಮಂಡಳಿಗಳು ಮುಂಚೆಯೇ ಲೆಕ್ಕ (Forecast) ಮಾಡಬೇಕು.

2) ಒಂದು ರಿಕ್ತ ಸ್ಥಾನ ಉದ್ಭವಿಸುವ ಒಂದು ವರ್ಷದ ಮುಂಚೆಯೇ ಅಂತಹ ಹುದ್ದೆಯನ್ನು ಗುರುತಿಸಿ, ಅದನ್ನು ಸಂದರ್ಭಾನುಸಾರ, ಬಡ್ತಿ ಮೂಲಕ ಅಥವಾ ನೇರ ನೇಮಕಾತಿಯ ಮೂಲಕ ನಿಗದಿತ ಕಾರ್ಯ ವಿಧಾನದ ಪ್ರಕಾರ ತುಂಬಲು ಆಡಳಿತ ಮಂಡಳಿ ಕ್ರಮ ಆರಂಭಿಸಬೇಕು.

3) ರಿಕ್ತ ಸ್ಥಾನ ಉದ್ಭವಿಸುವ ಒಂದು ವರ್ಷದ ಮುಂಚೆಯೇ ಸಂಬಂಧಿಸಿದ ಆಡಳಿತ ಮಂಡಳಿ ಅದನ್ನು ತುಂಬಲು ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಕೋರತಕ್ಕದ್ದು.

4) ರಿಕ್ತ ಸ್ಥಾನಗಳನ್ನು ತುಂಬುವ ಕುರಿತು ಜಾರಿಯಲ್ಲಿರುವ ಸರ್ಕಾರದ ಸೂಚನೆ, ಮಿತವ್ಯಯ ಆದೇಶ ಇತ್ಯಾದಿಗಳನ್ನು ಗಮನದಲ್ಲಿಟ್ಟುಕೊಂಡು, ಸಕ್ಷಮ ಪ್ರಾಧಿಕಾರ, ಅಂತಹ ಕೋರಿಕೆ ಸ್ವೀಕೃತವಾದ ಒಂದು ತಿಂಗಳ ಒಳಗೆ ತನ್ನ ತೀರ್ಮಾನವನ್ನು ಆಡಳಿತ ಮಂಡಳಿಗೆ ತಿಳಿಸತಕ್ಕದ್ದು.

5) ಪೂರ್ವಾನುಮತಿ ಸ್ವೀಕೃತವಾದ ತಕ್ಷಣ ಆಡಳಿತ ಮಂಡಳಿಯು ನಿಗಧಿತ ಕಾರ್ಯ ವಿಧಾನ ಹಾಗೂ ಮೀಸಲಾತಿ ಆದೇಶಗಳ ಪ್ರಕಾರ ಆಯ್ಕೆ ಪ್ರಕ್ರಿಯೆಯನ್ನು ಆರಂಭಿಸತಕ್ಕದ್ದು.

6) ಅರ್ಹ ಅಭ್ಯರ್ಥಿಯನ್ನು ಆಯ್ಕೆ ಮಾಡಿದ ತಕ್ಷಣ ಆಡಳಿತ ಅವನ ನೇಮಕಾತಿಗಾಗಿ ಸಕ್ಷಮ ಪ್ರಾಧಿಕಾರದ ಅನುಮೋದನೆಯನ್ನು ಕೋರತಕ್ಕದ್ದು.

7) ಅನುಮೋದನೆ ಕೋರಿದ ಅಂತಹ ಪ್ರಸ್ತಾವನೆಗಳು ಸ್ವೀಕೃತವಾದ 90 ದಿನಗಳ ಒಳಗಾಗಿ ಸಕ್ಷಮ ಪ್ರಾಧಿಕಾರ ಅದರ ಕುರಿತು ತನ್ನ ಅಂತಿಮ ತೀರ್ಮಾನವನ್ನು ಸಂಬಂಧಿಸಿದ ಆಡಳಿತ ಮಂಡಳಿಗೆ ತಿಳಿಸತಕ್ಕದ್ದು.

8) ಸಕ್ಷಮ ಪ್ರಾಧಿಕಾರ ಅನುಮೋದನೆ ಪಡೆದ ನಂತರವೇ ಆಡಳಿತ ಆಯ್ಕೆಯಾದ ಅಭ್ಯರ್ಥಿಯನ್ನು ನೇಮಕಾತಿ ಮಾಡತಕ್ಕದ್ದು.

9) ಈ ರೀತಿ ನೇಮಕಾತಿ ಆದೇಶವನ್ನು ಪಡೆದ ಅಭ್ಯರ್ಥಿಯು ಕೆಲಸಕ್ಕೆ ಸೇರಿದ ದಿನಾಂಕದಿಂದ ಅವನ ವೇತನವನ್ನು ನಿಗದಿಪಡಿಸಿ ಪಾವತಿ ಮಾಡತಕ್ಕದ್ದು.

4. ಸಾಂದರ್ಭಿಕವಾಗಿ ಹೇಳುವುದಾದರೆ, ಅನುದಾನಿತ ಪ್ರೌಢ ಶಾಲೆಗಳಲ್ಲಿನ ನೇರ ನೇಮಕಾತಿ ರಿಕ್ತ ಸ್ಥಾನಗಳನ್ನು ತುಂಬುವ ಕುರಿತು ದಿನಾಂಕ : 13–11–2003 ರ ಸುತ್ತೋಲೆ ಸಂಖ್ಯೆ: ಇಡಿ: 137:ಎಸ್ಇಪಿ 2001 (ಭಾಗ) ರನ್ವಯ ನಿಗದಿತ ಪ್ರಕ್ರಿಯೆಯನ್ನು ಸರಳೀಕರಿಸಲಾಗಿದೆ. ಅಂದರೆ ರಿಕ್ತ ಸ್ಥಾನವನ್ನು ತುಂಬಲು ಆಡಳಿತ ಮಂಡಳಿ ಸಕ್ಷಮ ಪ್ರಾಧಿಕಾರಕ್ಕೆ ಮಂಡಿಸಿದ ಪ್ರಸ್ತಾವನೆಯನ್ನು ಪರಿಶೀಲಿಸಿ ಸಕ್ಷಮ ಪ್ರಾಧಿಕಾರಕ್ಕೆ ವರದಿ ಮಾಡಲು ರಚಿಸಲಾಗಿದ್ದ ಸಮಿತಿಯನ್ನು ರದ್ದುಗೊಳಿಸಲಾಗಿದೆ.

5. ಮೇಲೆ ನಮೂದಿಸಲಾದ ಸೂಚನೆಗಳನ್ನು ಸಂಬಂಧಿಸಿದ ಆಡಳಿತ ಮಂಡಳಿಗಳು ಕಟ್ಟು ನಿಟ್ಟಾಗಿ ಪಾಲಿಸತಕ್ಕದ್ದು. ಯಾವುದೇ ಆಡಳಿತ ಮಂಡಳಿ ಅದನ್ನು ಉಲ್ಲಂಘಿಸಿದಲ್ಲಿ ಕರ್ನಾಟಕ ಶಿಕ್ಷಣ ಅಧಿನಿಯಮ, 1985 ಹಾಗೂ ಅದರಡಿಯಲ್ಲಿ ರಚಿಸಲಾದ ನಿಯಮಗಳನ್ವಯ ಅದರ ವಿರುದ್ಧ ಕ್ರಮವನ್ನು ತೆಗೆದುಕೊಳ್ಳತಕ್ಕದ್ದು. ಸಕ್ಷಮ ಪ್ರಾಧಿಕಾರಿಗಳೂ ಸಹ ಅವರಿಗೆ ಸಂಬಂಧಿಸಿದಂತೆ ನಿಗದಿಪಡಿಸಿದ ಕಾಲ ಮಿತಿಗಳನ್ನು ಕಟ್ಟು ನಿಟ್ಟಾಗಿ ಪಾಲಿಸತಕ್ಕದ್ದು.

6. ಈ ಸುತ್ತೋಲೆಯಲ್ಲಿ ಒಳಗೊಂಡ ಸೂಚನೆಗಳನ್ನು ಅನುದಾನಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಆಡಳಿತ ಮಂಡಳಿಗಳ ಗಮನಕ್ಕೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಜಿಲ್ಲಾ ಉಪ ನಿರ್ದೇಶಕರುಗಳು ತರತಕ್ಕದ್ದು.

ಅಬ್ದುಲ್ ಖದೀರ್,
ಸಹ ಕಾರ್ಯದರ್ಶಿ
(ಪ್ರಾಥಮಿಕ ಮತ್ತು ಪ್ರೌಢ
ಶಿಕ್ಷಣ)
ಶಿಕ್ಷಣ ಇಲಾಖೆ